ಸೇಷನ್ ಕೇಸ್ ನಂ.191/2025

ಪಿ.ಡಬ್ಲ್ಯೂಃ 02

ಸಿ.ಡಬ್ಲ್ಯೂಃ 30

**ದಿನಾಂಕಃ 12.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರಿಂದಃ**

7. ನಾನು 5 ನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿ ಓದಿರುತ್ತೇನೆ.

ಪ್ರಶ್ನೆಃ 1 ನೇ ಆರೋಪಿ ಹಾಗೂ ಚಾಸಾಃ 32 ರವರ ನಡುವೆ ಸಂಬಂಧ ಇದೆ ಸುರೇಶ ಬಂಡಿವಡ್ಡರ ಮೊದಲ ಬಾರಿಗೆ ಯಾವಾಗ ನಿಮ್ಮ ಬಳಿ ಹೇಳಿದ್ದ ?
ಉತ್ತರಃ ಈ ಪ್ರಕರಣದ ಘಟನೆಗೆ 2-3 ತಿಂಗಳ ಹಿಂದೆಯೇ ನನ್ನ ಬಳಿ ಈ ಬಗ್ಗೆ ಹೇಳಿದ್ದ.

8. ಆ ಬಗ್ಗೆ ನಾವೇನು ಪಂಚಾಯತಿ ಮಾಡಿರಲಿಲ್ಲ. ದೇವಸ್ಥಾನದಲ್ಲಿ ಪಂಚಾಯತಿ ಸೇರಿದ್ದ ಕಾಲಕ್ಕೆ ಯಾವ ಕಾರಣಕ್ಕಾಗಿ ಅಲ್ಲಿ ಸೇರಿದ್ದೇವೆಂದು ಮೊದಲು ಮಾತುಕತೆ ನಡೆದಿತ್ತು. ಪಂಚಾಯತಿ ಸೇರಿದ 2-3 ನಿಮಿಷಗಳ ಕಾಲ ಆ ರೀತಿ ಮಾತುಕತೆ ನಡೆಯಿತು. ಮೃತನು 1 ನೇ ಆರೋಪಿಯ ಮೇಲೆ ಕೈಯಿಂದ ಹೊಡೆಯುವ ಮುನ್ನ ಆರೋಪಿತರು ಹಾಗೂ ಅಲ್ಲಿ ಸೇರಿದ್ದ ಜನಗಳ ನಡುವೆ ಮಾತುಕತೆ ನಡೆಯುತ್ತಿತ್ತು. ಸುರೇಶ ಬಂಡಿವಡ್ಡರನು 1 ನೇ ಆರೋಪಿಗೆ ಕೈಯಿಂದ ಒಂದು ಪೆಟ್ಟು ಕೊಟ್ಟ ನಂತರ ಉಳಿದವರು ಆತನಿಗೆ ಕೈಯಿಂದ ಹೊಡೆದರು ಎನ್ನುವುದು ಸರಿ. ಸಾಕ್ಷಿ ಹೇಳುತ್ತಾರೆ ಆ ಕಾಲಕ್ಕೆ 1 ನೇ ಆರೋಪಿಯು ಕೆಟ್ಟ ಪದ ಬಳಸಿದ್ದ. 1 ನೇ ಆರೋಪಿಗೆ ಮೃತನು ಕೈಯಿಂದ ಹೊಡೆಯಲು ಆತ ಯಾವ ಕೆಟ್ಟ ಪದವನ್ನು ಬಳಸಿದ್ದ ಎಂಬುದನ್ನು ನಿಖರವಾಗಿ ನಾನು ನನ್ನ ಸಾಕ್ಷ್ಯದಲ್ಲಿ ಹೇಳಿಲ್ಲ ಎನ್ನುವುದು ಸರಿ. ಸುರೇಶ ಬಂಡಿವಡ್ಡರನಿಗೆ ಅಲ್ಲಿ ಸೇರಿದ್ದ ಯಾವ ಜನ ಚಾಕುವಿನಿಂದ ಹಲ್ಲೆ ಮಾಡಿದ್ದಾರೆಂದು ನಾನು ನೋಡಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಹಲ್ಲೆ ಮಾಡುವ ಕಾಲಕ್ಕೆ ನಾನು ಅದನ್ನು ಕಣ್ಣಾರೆ ನೋಡಿದ್ದೇನೆ. 2 ನೇ ಆರೋಪಿಯು ಚಾಕುವಿನಿಂದ ಮೃತ ಸುರೇಶ ಬಂಡಿವಡ್ಡರನಿಗೆ ಹಲ್ಲೆಯನ್ನು ಮಾಡಿಯೇ ಇಲ್ಲ ನಾನು

ಬಿಡಿಸಿಕೊಳ್ಳಲು ಹೋದಾಗ ನನ್ನ ಮೇಲೆ ಯಾವುದೇ ಹಲ್ಲೆ ಆಗಿಯೇ ಇಲ್ಲ ಎಂದು ಸೂಚಿಸುವುದು ಸರಿಯಲ್ಲ.

9. ಮು.ಮಾ. 9 ಚಾಕುವಿನಿಂದ ನನಗಾಗಲಿ ಅಥವಾ ಮೃತನಿಗಾಗಲಿ 2 ನೇ ಆರೋಪಿ ಹಲ್ಲೆ ಮಾಡಿಲ್ಲ ಹಾಗೂ ಆ ಚಾಕು ಆತನಿಗೆ ಸಂಬಂಧಪಟ್ಟಿದ್ದು ಅಲ್ಲವೇ ಅಲ್ಲ ಎಂದು ಸೂಚಿಸುವುದು ಸರಿಯಲ್ಲ. ಹನುಮಂತ ದೇವರ ಗುಡಿಯ ಪಂಚಾಯತಿಗೆ 2 ನೇ ಆರೋಪಿ ನನ್ನನ್ನು ಕರೆಸಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಆ ದಿನ ಪಂಚಾಯತಿಯನ್ನು ಮೃತನೇ ಕರೆಸಿದ್ದ ಹಾಗೂ ಅಲ್ಲಿ ಆತನು ಸಂಬಂಧಿಕರನ್ನೇ ಕರೆಯಿಸಿ ಈ ಪ್ರಕರಣದ 3 ಜನ ಆರೋಪಿತರನ್ನು ಅಲ್ಲಿಯೇ ಮುಗಿಸಬೇಕು ಎಂದು ನಿರ್ಧರಿಸಿದ್ದ ಎಂದು ಸೂಚಿಸುವುದು ಸರಿಯಲ್ಲ. ಮೃತನೇ ಆರೋಪಿತರನ್ನು ಮುಗಿಸಬೇಕು ಎಂದು ಸಂಚು ರೂಪಿಸಿದ್ದ ವಿಚಾರ ನನಗೆ ತಿಳಿದಿದೆ ಆದರೂ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ. 2 ನೇ ಆರೋಪಿ ಯಲ್ಲಪ್ಪ ಘಟನಾ ಕಾಲಕ್ಕೆ ಎಂತಹ ಚಾಕುವನ್ನು ಹಲ್ಲೆಗೆ ಬಳಸಿದ್ದ ಎಂದು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ. ಮು.ಮಾ. 9 ಬಟನ್ ಚಾಕು ಅದನ್ನೇ 2 ನೇ ಆರೋಪಿ ಘಟನಾ ಕಾಲಕ್ಕೆ ಹಲ್ಲೆಗೆ ಬಳಸಿದ್ದ ಎಂದು ನಾನು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ.

10. ಸುರೇಶ ಹಾಗೂ ನನ್ನ ಸಂಬಂಧ ಚೆನ್ನಾಗಿತ್ತು. ಆದರೆ ನಾನು ಆತನು ಸೇರಿ ಒಟ್ಟಿಗೆಯೇ ಎಲ್ಲಿಗಾದರೂ ಹೋಗಿ ಕೂಲಿ ಕೆಲಸ ಮಾಡಿರುವುದಿಲ್ಲ. ಅದೇರೀತಿ ನಾನು ಆತನ ಮನೆಗೆ ಹೋಗುವುದಾಗಲಿ ಆತ ನಮ್ಮ ಮನೆಗೆ ಬರುವುದಾಗಲಿ ಮಾಡಿರುವುದಿಲ್ಲ. ಈ ಪ್ರಕರಣದಲ್ಲಿ ನಾನು ನುಡಿದಂತಹ ಯಾವುದೇ ಘಟನೆ ನಡೆಯದಿದ್ದರೂ ಸಹಿತ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ.

11. ನನ್ನ ವಿರುದ್ಧ ಖಾನಾಪೂರ ಪೋಲೀಸ್ ಠಾಣೆಯಲ್ಲಿ ಸುಮಾರು 7-8 ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಆದ್ದರಿಂದ ನನ್ನ ಹಾಗೂ ಪೋಲೀಸರ ಸಂಬಂಧ ತುಂಬಾ ಉತ್ತಮವಾಗಿದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ನನ್ನ ವಿರುದ್ಧ ಜಗಳದ ಸಂಬಂಧ ಒಂದು ಪ್ರಕರಣ ದಾಖಲಾಗಿದೆ ಅದು ಸಹ ಸುಳ್ಳಿನಿಂದ ಕೂಡಿದೆ ಎಂದು

ಹೇಳುತ್ತಾರೆ. ನಾನು ಪ್ಲೇಯಿಂಗ್ ಕಾರ್ಡ್ ಆಡುತ್ತಿದ್ದೆ ಎಂದು ಕರ್ನಾಟಕ ಪೋಲೀಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಸಿಸಿ 70/2025 ರಲ್ಲಿ ನಾನು ಆರೋಪಿ ಎನ್ನುವುದು ಸರಿ. ಸಾಕ್ಷಿ ಹೇಳುತ್ತಾರೆ ಅದು ಒಂದೇ ಪ್ರಕರಣ ನನ್ನ ಮೇಲೆ ದಾಖಲಾಗಿರುವುದು ಎಂದು ಹೇಳುತ್ತಾರೆ. ಎಸ್ ಸಿ 193/2022 ಪ್ರಕರಣದಲ್ಲಿ ನಾನು ಹಾಗೂ ಇತರರು ಕೊಲೆಗೆ ಪ್ರಯತ್ನ ಮಾಡಿದ್ದೇವೆಂದು ಪ್ರಕರಣ ದಾಖಲಾಗಿತ್ತು ಎನ್ನುವುದು ಸರಿ. ಸಾಕ್ಷಿ ಹೇಳುತ್ತಾರೆ ಅದರಲ್ಲಿ ನಾನು ನಿರಪರಾಧಿ ಎಂದು ಆದೇಶವಾಗಿದೆ ಎಂದು ಹೇಳುತ್ತಾರೆ. ನಾವು ಕಾನೂನು ಬಾಹೀರ ಚಟುವಟಿಕೆಗಳನ್ನು ಮಾಡುವ ಜನಗಳಾಗಿದ್ದು ನಮ್ಮ ಮೇಲೆ ಜನಗಳು ದೂರು ಸಲ್ಲಿಸಲು ಸಹ ಭಯದಿಂದ ಬದುಕುತ್ತಾರೆಂದು ಸೂಚಿಸುವುದು ಸರಿಯಲ್ಲ.

12. ಖಾನಾಪೂರದಲ್ಲಿ ಕ್ರಾಂತಿಸೇನೆ ಎಂಬ ಸಂಘಟನೆಯನ್ನು 5-6 ವರ್ಷಗಳ ಹಿಂದೆ ಕಟ್ಟಿದ್ದೆ ಆದರೆ ಈಗ ನಾನು ಅದನ್ನು ಬಿಟ್ಟಿರುತ್ತೇನೆ. ಆದರೆ ಈಗ ನಾನು ಯಾವುದೇ ಸಂಘಟನೆಯಲ್ಲೂ ಸಕ್ರೀಯವಾಗಿ ಭಾಗವಹಿಸಿರುವುದಿಲ್ಲ. ಈ ಪ್ರಕರಣದಲ್ಲಿ ಆರೋಪಿತರು ಅಮಾಯಕರಿದ್ದು ಯಾವುದೇ ಕೃತ್ಯ ಮಾಡದಿದ್ದರೂ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ. 2 ನೇ ಆರೋಪಿ ದಿಃ 03.08.2025 ರಂದು ಪಂಚಾಯತಿ ಕರೆದಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.